ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು.

ಇಮೈಲ್: commissioner.pue@gmail.com ದೂರವಾಣಿ ಸಂಖ್ಯೆ: 080 23561944.

ಸಂಖ್ಯೆ: ಪಿಯುಇ/ಆಡಳಿತ/ಕೆಎಟಿ-8269/2015. ದಿನಾಂಕ:18-11-2020.

## ಪದವಿ ಪೂರ್ವ ಶಿಕ್ಷಣ ಇಲಾಖಾ ನಿರ್ದೇಶಕರ ನಡವಳಿಗಳು

**ವಿಷಯ:** ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು, ಇವರ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 8269/2015 c/w 7748/2015 ಕ್ಕೆ ದಿನಾಂಕ: 20-01-2020ರಂದು ನೀಡಿರುವ ತೀರ್ಪಿಗೆ ಅಂತಿಮ ಆದೇಶವನ್ನು ಹೊರಡಿಸುವ ಕುರಿತು.

**ಉಲ್ಲೇಖ:**

1. ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 8269/2015 c/w 7748/2015 ರ ಆದೇಶ ದಿನಾಂಕ: 20-01-2020.
2. ಸರ್ಕಾರ ಆದೇಶ ಸಂಖ್ಯೆ: ಇಡಿ 176 ಟಿಪಿಯು 97. ದಿನಾಂಕ: 28-05-2001.
3. ಈ ಕಛೇರಿಯ ಆದೇಶ ಸಂಖ್ಯೆ: ಪಪೂಶಿ/ಸಿಬ್ಬಂದಿ-1/ಜೇಷ್ಠತೆ1/2006-07. ದಿನಾಂಕ: 07-05-2007.
4. ಈ ಕಛೇರಿಯ ಜ್ಞಾಪನ ಸಂಖ್ಯೆ: ಪಪೂಶಿಇ/ಸಿಬ್ಬಂದಿ-1/ವರ್ಗಾ ಸಿಆರ್ 09/2008-09. ದಿನಾಂಕ: 07-01-2009.
5. ಈ ಕಛೇರಿಯ ಹಿಂಬರಹ ದಿನಾಂಕ: 12-12-2012.
6. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ವಿಜಯಪುರ ಜಿಲ್ಲೆ, ವಿಜಯಪುರ ಇವರ ಪತ್ರ ಸಂಖ್ಯೆ: ಇ1/ಕಾಮಿಬಡ್ತಿಮುಂಕುರಿತು/2012-13/ / ದಿನಾಂಕ: 16-10-2013.
7. ಈ ಕಛೇರಿಯ ಜ್ಞಾಪನ ಸಂಖ್ಯೆ: ಪಪೂಶಿಇ/ಸಿಬ್ಬಂದಿ-1/ಕಾಮಿಬ/57/2012-13. ದಿನಾಂಕ: 06-02-2013 ಹಾಗೂ ದಿನಾಂಕ: 23-03-2013.
8. ಈ ಕಛೇರಿಯ ಜ್ಞಾಪನ ಸಂಖ್ಯೆ: ಪಪೂಶಿಇ ಸಿಬ್ಬಂದಿ-1 ಎ (2) ಪ್ರದಸ ಜೇಪಟ್ಟಿ 2013-14. ದಿನಾಂಕ: 27-01-2015.
9. ಶ್ರೀಮತಿ ಬಸಮ್ಮ ಎಂ ವಸ್ತ್ರದ, ಪ್ರದಸ, ಬಾಲಕರ ಸರ್ಕಾರ ಪದವಿ ಪೂರ್ವ ಕಾಲೇಜು, ವಿಜಯಪುರ ಇವರ ಪತ್ರ ದಿನಾಂಕ: 17-03-2020.
10. ಈ ಕಛೇರಿಯ ಪತ್ರ ಸಂಖ್ಯೆ: ಪಿಯುಇ/ಆದೇಶ/ಕೆಎಟಿ-8269/2015. ದಿನಾಂಕ: 06-07-2020.
11. ಸರ್ಕಾರದ ಪತ್ರ ಸಂಖ್ಯೆ: ಇಡಿ 37 ಡಿಜಿಡಬ್ಲ್ಯೂ 2020. ದಿನಾಂಕ: 25-08-2020
12. ಈ ಕಛೇರಿಯ ಜ್ಞಾಪನ ಸಂಖ್ಯೆ: ಪಪೂಶಿಇ-1/ಆವಿ-ಎ/ವಿನಿ-1/ಜೇಷ್ಠತೆ/2019-20. ದಿನಾಂಕ: 16-11-2019.

* * *

**ಪ್ರಸ್ತಾವನೆ:**

ಶ್ರೀಮತಿ ಬಸಮ್ಮ ಎಂ ವಸ್ತ್ರದ, ಪ್ರಥಮ ದರ್ಜೆ ಸಹಾಯಕರು ಇವರು ಜೇಷ್ಠತೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 8269/2015 c/w 7748/2015ನ್ನು ದಾಖಲಿಸಿದ್ದರು. ಸದರಿ ದಾವೆಗಳಿಗೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ಅಂತಿಮ ಉಲ್ಲೇಖ(1)ರಲ್ಲಿ ಆದೇಶವನ್ನು ಹೊರಡಿಸಿರುತ್ತದೆ. ಸದರಿ ಆದೇಶದಂತೆ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ

...02

ದರ್ಜೆ ಸಹಾಯಕರು ಇವರನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಿ ಪ್ರಥಮ ದರ್ಜೆ ಸಹಾಯಕರ ವೃಂದದ ಜೇಷ್ಠತೆಯಲ್ಲಿ ಪರಿಗಣಿಸುವ ಕುರಿತು ಈ ಕೆಳಗಿನಂತೆ ವಿವರಿಸಿದೆ.

ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರು ಸಹ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: ಸಿ(10)–ನೇಮಕ–ಕ್ರೋಢೀಕೃತ–1/2002–2003. ದಿನಾಂಕ: 12–08–2002 ರಂತೆ ಅನುಕಂಪದ ಆಧಾರದಲ್ಲಿ ನೇಮಕಗೊಂಡಿರುತ್ತಾರೆ. ಉಲ್ಲೇಖ(2)ರಲ್ಲಿ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ ಪದವಿ ಪೂರ್ವ ವಿಭಾಗಕ್ಕೆ ಮಂಜೂರಾಗಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಹುದ್ದೆಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ವರ್ಗಾಯಿಸಿ ಆದೇಶಿಸಿರುತ್ತಾರೆ. ಸದರಿ ಆದೇಶದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ವರ್ಗಾಯಿಸಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರನ್ನು ಆಯಾ ಹುದ್ದೆಗಳಲ್ಲಿ ಮುಂದಿನ ಆದೇಶದವರೆಗೆ ಮುಂದುವರಿಸಿರುತ್ತಾರೆ. ಅಲ್ಲದೆ ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರನ್ನು ಅವರ ಒಪ್ಪಿಗೆಗೆ ಒಳಪಟ್ಟು ಹಾಗೂ ಆಯ್ಕೆಗೆ (ಆಪ್ಷನ್) ಅವಕಾಶ ನೀಡಿ ಸಾರ್ವಜನಿಕ ಹಿತದೃಷ್ಟಿಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಸೇವೆಗಳಿಗೆ ಖಾಯಂ ಆಗಿ ವರ್ಗಾಯಿಸಲು ಅನುಮತಿ ನೀಡಲಾಗಿದೆಯೆಂಬ ಷರತ್ತನ್ನು ವಿಧಿಸಿರುತ್ತಾರೆ.

ಉಲ್ಲೇಖ(2)ರ ಆದೇಶದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನೇಮಕಾತಿಗೊಂಡ ಕೆಲವು ನೌಕರರುಗಳನ್ನು ಸೇವಾವಿಲೀನ ಮಾಡಿಕೊಳ್ಳಲಾಗಿರುತ್ತದೆ. ಈ ರೀತಿಯಾಗಿ ಸೇವಾ ವಿಲೀನದ ಸಮಯದಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರು ಸರ್ಕಾರಿ ಪದವಿ ಪೂರ್ವ ಕಾಲೇಜು, ಲಿಂಗಸಗೂರು, ರಾಯಚೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸೇವಾ ವಿಲೀನಕ್ಕಾಗಿ ಕೋರಿಕೆಯನ್ನು ಸಲ್ಲಿಸಿರುವುದಾಗಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಗೆ ಸಲ್ಲಿಸಿರುವ ಅರ್ಜಿಯಲ್ಲಿ ದಾಖಲೆಯನ್ನು ನೀಡಿರುತ್ತಾರೆ. ಆದರೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಸದರಿಯವರು ಸೇವಾ ವಿಲೀನಕ್ಕಾಗಿ ಸಲ್ಲಿಸಿರುವ ಕೋರಿಕೆ ಪ್ರತಿ ಇರುವುದಿಲ್ಲ. ಅಲ್ಲದೆ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಸೇವೆಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸೇವೆಗಳಿಗೆ ವಿಲೀನಗೊಳಿಸಿ ಆದೇಶವನ್ನು ಹೊರಡಿಸಿರುವುದಿಲ್ಲ.

ಉಲ್ಲೇಖ(3)ರ ಈ ನಿರ್ದೇಶನಾಲಯದ ಸುತ್ತೋಲೆಯಲ್ಲಿ ಬೋಧಕೇತರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಸದರಿ ಜೇಷ್ಠತಾ ಪಟ್ಟಿಯಲ್ಲಿ ಸೇವಾ ವಿಲೀನಗೊಳ್ಳದಿದ್ದರೂ ಪ್ರಥಮ ದರ್ಜೆ ಸಹಾಯಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ: 95ಬಿರಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್ ಇವರ ಹೆಸರನ್ನು ನಮೂದಿಸಲಾಗಿರುತ್ತದೆ. ನಂತರ ಅಂತಿಮ ಜೇಷ್ಠತಾ ಪಟ್ಟಿಯ ಕ್ರಮಸಂಖ್ಯೆ: 123ರಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಹೆಸರನ್ನು ಸೇರಿಸಲಾಗಿರುತ್ತದೆ.

ಇವುಗಳಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರು ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಸೇವಾ ವಿಲೀನಗೊಳ್ಳದಿದ್ದರೂ ಸಹ ಹತ್ತು ವರ್ಷಗಳ ಕಾಲಮಿತಿ ವೇತನ ಬಡ್ತಿಯ ಮಂಜೂರಾತಿಗಾಗಿ ಈ ನಿರ್ದೇಶನಾಲಯಕ್ಕೆ ಪ್ರಾಚಾರ್ಯರು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ ಇವರಿಂದ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ವಿಜಯಪುರ ಇವರ ಮುಖಾಂತರ ಈ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಉಲ್ಲೇಖ(5)ರಲ್ಲಿ ಶ್ರೀಮತಿ ಬಿ ಎಂ ವಸ್ತ್ರದ್, ಪ್ರದಸ ಇವರಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ ಮಂಜೂರಾತಿ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಸದರಿಯವರ ನೇಮಕಾತಿ ಪ್ರಾಧಿಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯಾಗಿರುತ್ತದೆ. ಆದ್ದರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿ ಪಡೆಯಲು ಸೂಚಿಸುತ್ತ ಮೂಲ ಸೇವಾ ಪುಸ್ತಕವನ್ನು ಪ್ರಸ್ತಾವನೆಯೊಂದಿಗೆ ಹಿಂದಿರುಗಿಸಿದೆಯೆಂಬ ಹಿಂಬರವನ್ನು ನೀಡಲಾಗಿದೆ.

ಉಲ್ಲೇಖ(5)ರಲ್ಲಿ ನೀಡಿರುವ ಹಿಂಬರಹಕ್ಕೆ ಉಲ್ಲೇಖ(6)ರಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಉಲ್ಲೇಖ(3)ರಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ವಿಲೀನಗೊಂಡಿರುತ್ತಾರೆ. (ಜೇಷ್ಠತಾ ಕ್ರಮ ಸಂಖ್ಯೆ: 95ಬಿ ಇರುತ್ತದೆ). (ಈಗಿನ ಕ್ರಮಸಂಖ್ಯೆ: 123 ಇರುತ್ತದೆ). ಸದರಿಯವರಿಗೆ 10 ವರ್ಷಗಳ ಕಾಲಮಿತಿ ವೇತನ, ಬಡ್ತಿ ಮಂಜೂರು ಮಾಡಲು ವಿನಂತಿಸಿಕೊಂಡಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಮೂಲ ಸೇವಾ ಪುಸ್ತಕದೊಂದಿಗೆ ಪ್ರಸ್ತಾವನೆಯನ್ನು ಪುನ: ಸಲ್ಲಿಸಿರುತ್ತಾರೆ. ಆದರೆ ಈ ಹಂತದಲ್ಲಿ ಜಿಲ್ಲಾ ಉಪನಿರ್ದೇಶಕರು ಸೂಕ್ತವಾಗಿ ಪರಿಶೀಲಿಸದೆ ಈ ನಿರ್ದೇಶನಾಲಯಕ್ಕೆ ಅಪ್ರಸ್ತುತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ(6)ರಲ್ಲಿ ಸಲ್ಲಿಸಲಾಗಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರಿಗೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿಯನ್ನು ಮಂಜೂರು ಮಾಡಿರುತ್ತಾರೆ. ಉಲ್ಲೇಖ(4)ರಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಲಿಂಗಸಗೂರು, ರಾಯಚೂರು ಜಿಲ್ಲೆ ಇವರನ್ನು ಸರ್ಕಾರವು ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ ಇಲ್ಲಿಗೆ ವರ್ಗಾಯಿಸಿದ್ದು, ಅದರಂತೆ ಈ ಕಛೇರಿಯಿಂದ ಆದೇಶವನ್ನು ಹೊರಡಿಸಲಾಗಿದೆ.

ನಂತರದಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ, ಪ್ರಥಮ ದರ್ಜೆ ಸಹಾಯಕರು ಇವರ ಹೆಸರನ್ನು ಜೇಷ್ಠತಾ ಪಟ್ಟಿಯಿಂದ ಕೈಬಿಡಲಾಗಿದೆ. ಸದರಿ ಜೇಷ್ಠತೆಯನ್ನು ಆದರಿಸಿ ಪ್ರಥಮ ದರ್ಜೆ ಸಹಾಯಕರ ವೃಂದದಿಂದ ಅಧೀಕ್ಷಕರ ವೃಂದಕ್ಕೆ ಬಡ್ತಿ ನೀಡಲಾಗಿರುತ್ತದೆ. ಈ ಸಂಬಂದ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರು ಉಲ್ಲೇಖ(1)ರಲ್ಲಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆಯನ್ನು ದಾಖಲಿಸಿದ್ದು, ಸದರಿ ಆಡಳಿತ ನ್ಯಾಯ ಮಂಡಳಿಯವರು ಈ ಕೆಳಗಿನಂತೆ ಆದೇಶಿಸಿದೆ:

1. Both the Applications are allowed. Respondents are hereby directed to take appropriate action in accordance with law for inclusion of the name of the applicant in final seniority list pertaining to First Division Assistant in the Department of Pre-University Education published as on 30-11-2014, with appropriate ranking as per her date or eligibility assigned in the final seniority list published as on 31-03-2007. Further, the respondents are also directed to considered the case of the applicant for promotion to the cadre of Superintend and grant all consequential benefits in accordance with law.

2. The above exercise shall be completed within four months from the date of receipt of certified copy of this order.

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು–1977ರಂತೆ ಒಂದು ಸರ್ಕಾರಿ ಇಲಾಖೆಯಲ್ಲಿ ನೇಮಕಾತಿ ಹೊಂದಿ ಇನ್ನೊಂದು ಸರ್ಕಾರಿ ಇಲಾಖೆಗೆ ಸೇವಾ ವಿಲೀನದ ಸಂಬಂಧ ಇರುವ

ನಿಯಮಗಳನ್ನು ಪರಿಶೀಲಿಸಲಾಗಿದೆ. ಅದರಂತೆ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ವಿಲೀನವಾಗಲು ಕೋರಿಕೆಯನ್ನು ಸಲ್ಲಿಸಿರುವುದಾಗಿ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಗೆ ಸಲ್ಲಿಸಿರುವ ದಾಖಲೆಗಳಿಂದ ಕಂಡುಬರುತ್ತದೆ. ಆದರೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಸೇವಾ ವಿಲೀನಗೊಂಡಿರುವ ಸಂಬಂದ ಆದೇಶವಾಗಿರುವುದಿಲ್ಲ. ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ನೇಮಕಾತಿ ಪ್ರಾಧಿಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯಾಗಿದ್ದು, ಈ ನಿರ್ದೇಶನಾಯದಿಂದ ವಿಲೀನಕ್ಕೆ ಆದೇಶವಾಗದಿದ್ದರೂ ಸಹ ಸರ್ಕಾರಿ ಪದವಿ ಪೂರ್ವ ಕಾಲೇಜು, ಲಿಂಗಸುಗೂರು, ರಾಯಚೂರು ಜಿಲ್ಲೆ ಇಲ್ಲಿನ ಪ್ರಾಚಾರ್ಯರು ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಸೇವಾ ಪುಸ್ತಕದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ವಿಲೀನಗೊಂಡಿರುತ್ತಾರೆಂದು ನಮೂದಿಸಿರುತ್ತಾರೆ. ಅಲ್ಲದೆ ಸಾರ್ವಜನಿಕ ಶಿಕ್ಷಣ ಇಲಾಖೆಯು ದಿನಾಂಕ: 07-09-2019ರಲ್ಲಿ ಹೊರಡಿಸಿರುವ ಪ್ರಥಮ ದರ್ಜೆ ಸಹಾಯಕರ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಶೀಲಿಸಲಾಗಿ ಸದರಿ ಜೇಷ್ಠತಾ ಪಟ್ಟಿಯಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಹೆಸರನ್ನು ಪರಿಗಣಿಸಿರುವುದಿಲ್ಲ. ಅಲ್ಲದೆ ಉಲ್ಲೇಖ(9)ರಲ್ಲಿ ಸದರಿ ನೌಕರರು ಎಲ್ಲಾ ಸೇವಾ ಸೌಲ್ಯಗಳನ್ನು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ ಒದಗಿಸಿಕೊಡುವಂತೆ ಕೋರಿರುತ್ತಾರೆ. ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಸದರಿ ನೌಕರಳಿಗೆ ಸೇವಾ ಸೌಲಬ್ಯಗಳಿಂದ ವಂಚಿತರಾಗುತ್ತಿರುವುದು ಕಂಡುಬರುತ್ತಿದ್ದು, ಪ್ರಕರಣದ ಕುರಿತು ನಿರ್ಧಿಷ್ಠ ಮಾರ್ಗದರ್ಶನವನ್ನು ಕೋರಿ ಉಲ್ಲೇಖ(10)ರಲ್ಲಿ ಸರ್ಕಾರಕ್ಕೆ ಪತ್ರವನ್ನು ಬರೆಯಲಾಯಿತು.

ಉಲ್ಲೇಖ(10)ರ ಪತ್ರವನ್ನು ಸರ್ಕಾರವು ಪರಿಶೀಲಿಸಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 8269/2015 c/w 7748/2015ಕ್ಕೆ ದಿನಾಂಕ: 20-01-2020ರಲ್ಲಿ ನೀಡಿರುವ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅವಶ್ಯಕತೆ ಇಲ್ಲವೆಂದು ಸರ್ಕಾರಿ ವಕೀಲರು ಅಭಿಪ್ರಾಯ ನೀಡಿರುವುದರಿಂದ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ ಇವರನ್ನು ಪ್ರಥಮ ದರ್ಜೆ ಸಹಾಯಕರ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರನ್ನು ಸೂಕ್ತವಾಗಿ ಸೇರ್ಪಡೆ ಮಾಡಿ ಸದರಿಯವರಿಗೆ ಲಭ್ಯವಾಗುವ ವೃಂದದ ಹುದ್ದೆಗೆ ಬಡ್ತಿ ನೀಡುವ ಬಗ್ಗೆ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳವಂತೆ ನಿರ್ದೇಶಿಸಿರುತ್ತಾರೆ. ಮೇಲಿನ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಿಯುಇ/ಆಡಳಿತ/ಕೆಎಟಿ-8269/2015. ದಿನಾಂಕ: 18-11-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರು ನೇಮಕಾತಿಯು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಆಗಿರುತ್ತದೆ. ಆದರೆ ಸದರಿಯವರು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸೇವೆಗಳಿಗೆ ಸೇವಾ ವಿಲೀನಕ್ಕೆ ಕೋರಿಕೆಯನ್ನು ಸಲ್ಲಿಸಿರುವುದಾಗಿ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಅಲ್ಲದೆ ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಲಿಂಗಸುಗೂರು, ರಾಯಚೂರು ಜಿಲ್ಲೆ ಇವರು ಸೇವಾವಿಲೀನದ ಆದೇಶ ಹೊರಡಿಸದಿದ್ದರೂ ಸಹ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಸೇವಾ ಪುಸ್ತಕದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸೇವೆಗೆ ವಿಲೀನಗೊಂಡಿರುವುದಾಗಿ ನಮೂದಿಸಿರುತ್ತಾರೆ.

ಆದ್ದರಿಂದ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಸೇವೆಯನ್ನು ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ) ನಿಯಮಗಳು-1977ರ ನಿಯಮ-16ಎ ರಂತೆ ಪದವಿ

ಪೂರ್ವ ಶಿಕ್ಷಣ ಇಲಾಖೆಯ ಸೇವೆಗಳಿಗೆ ಉಲ್ಲೇಖ(11)ರಲ್ಲಿ ಸರ್ಕಾರವು ಅನುಮತಿಸಿರುವ ದಿನಾಂಕದಿಂದ ಸೇವಾ ವಿಲೀನಗೊಳಿಸಿ ಆದೇಶಿಸಿದೆ.

ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ಸೇವಾ ವಿಲೀನದಂತೆ ಉಲ್ಲೇಖ(12)ರಲ್ಲಿ ಈಗಾಗಲೇ ಅಂತಿಮಗೊಳಿಸಿ ಹೊರಡಿಸಿರು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕರ ಜೇಷ್ಠತಾ ಪಟ್ಟಿಗೆ ಈ ಕೆಳಕಂಡಂತೆ ತಿದ್ದುಪಡಿ ಹಾಗೂ ಸೇರ್ಪಡೆ ಮಾಡಿ ತಾತ್ಕಾಲಿಕ ಜೇಷ್ಠತಾ ಸಂಖ್ಯೆಯನ್ನು ನೀಡಿ ಆದೇಶಿಸಿದೆ.

| ಕ್ರಸ | ಹೆಸರು (ಶ್ರೀಮತಿ/ಶ್ರೀ) | ನೇಮಕಾತಿ ವಿಧಾನ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಪ್ರದಸ ಹುದ್ದೆಗೆ ನೇಮಕಾತಿ / ಬಡ್ತಿ ಹೊಂದಿದ / ವರದಿ ಮಾಡಿದ ದಿನಾಂಕ | ಮೀಸಲಾತಿ | ಷರಾ |
|---|---|---|---|---|---|---|---|
| 491 | ಬಸಮ್ಮ ಎಂ ವಸ್ತ್ರದ | ಅನುಕಂಪ | 01-06-1975 | 06-09-2002 | 06-09-2002 | – | ದಿನಾಂಕ: 25-08-2020 ರಿಂದ ಜೇಷ್ಠತೆಗೆ ಪರಿಗಣಿಸಿದೆ. |

ಮೇಲಿನಂತೆ ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು ಇವರ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಸೇರ್ಪಡೆ ಸಂಬಂದ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 17-12-2020ರೊಳಗಳಾಗಿ ಬಾದಿತ ನೌಕರರುಗಳು ತಮ್ಮ ಆಕ್ಷೇಪಣೆಗಳನ್ನು / ಮನವಿಗಳನ್ನು ದೃಢೀಕೃತ ಪೂರಕ ದಾಖಲೆಗಳೊಂದಿಗೆ ಶ್ರೀ **ನಾಗರಾಜ, ಸಹಾಯಕ ನಿರ್ದೇಶಕರು(ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-560012** ಇವರಿಗೆ ಅಂಚೆ ಮೂಲಕ ಅಥವಾ ಮುದ್ದಾಂ ನಿಗಧಿಪಡಿಸಿರುವ ದಿನಾಂಕದೊಳಗೆ ತಲುಪುವಂತೆ ಸಲ್ಲಿಸಲು ತಿಳಿಸಿದೆ. ನಿಗಧಿಪಡಿಸಿರುವ ಅವಧಿಯ ನಂತರ ಬರುವ ಮನವಿ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಶ್ರೀಮತಿ ಬಸಮ್ಮ ಎಂ ವಸ್ತ್ರದ್, ಪ್ರಥಮ ದರ್ಜೆ ಸಹಾಯಕರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ.
2. ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ವಿಜಯಪುರ ಜಿಲ್ಲೆ, ವಿಜಯಪುರ.
3. ಪ್ರಾಚಾರ್ಯರು, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ವಿಜಯಪುರ.
4. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಅರ್ಜಿ ಸಂಖ್ಯೆ: 8269/2015 c/w 7748/2015ರಲ್ಲಿ ಪ್ರತಿವಾದಿಗಳಾದ ಎಲ್ಲಾ ಅಧೀಕ್ಷಕರುಗಳಿಗೆ.
5. ಸಹಾಯಕ ನಿರ್ದೇಶಕರು(ಇ-ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6. ಹೆಚ್ಚುವರಿ/ಕಛೇರಿ ಪ್ರತಿ.